ನಂ. ಆರ್‌ಡಿ ೯ ಡಬ್ಲ್ಯೂಜಿಎ ೮೭ ದಿನಾಂಕ ೧೪-೩-೧೯೮೮

೩	೧೯೮೭-೮೮	೧	ಪೀರ್ ಮೌಲಲಿ ಮಸೀದಿ, ರಾಮಾಪುರ, ಸವದತ್ತಿ ತಾಲ್ಲೂಕು, ಬೆಳಗಾಂ	೧೦,೦೦೦-೦೦
		೨	ಪೀರ್ ಮಹಬೂಬ್, ಸುಭಾನಿ ಮಸೀದಿ ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೩	ಪೀರ್ ಹೈದರ್ ಮಸೀದಿ ರಾಮಾಪುರ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೪	ಇದ್ಗಾ, ಉರಗೋಳ ಹಳ್ಳಿ, ಸವದತ್ತಿ ತಾಲ್ಲೂಕು, ಬೆಳಗಾಂ	೧೦,೦೦೦-೦೦
		೫	ಬಾಡಲಿ ಮಸೀದಿ, ಉಗ್ರಗೋಳ ಹಳ್ಳಿ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೬	ಮಸೀದಿ, ಇಂಗಲಗಿ, ಸವದತ್ತಿ ತಾಲ್ಲೂಕು ಬೆಳಗಾಂ	೧೦,೦೦೦-೦೦
		೭	ಮಸೀದಿ, ಮಟಿಕೋಲಿ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦

ತಾಲ್ಲೂಕು ಪಂಚಾಯಿತಿಗಳಿಗೆ ಕಾಮಗಾರಿಗಳನ್ನು ಕೈಗೊಳ್ಳಲು ಅಧಿಕಾರ ವಹಿಸಿಕೊಡುವುದು

೨೨೨೧. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು) — ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಕ್ಷ್ ಮಂತರ್ಯ ಪಶಂಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಲ್ಲೂಕು ಅಭಿವೃದ್ಧಿ ಕಾಮಗಾರಿಗಳು ನೇರವಾಗಿ ಜಿಲ್ಲಾ ಪರಿಷತ್ತಿನ ಅಧಿಕಾರ ವ್ಯಾಪ್ತಿಯಲ್ಲಿ ಬರುವುದರಿಂದ ಕಾಮಗಾರಿಗಳು ವಿಳಂಬವಾಗುತ್ತಿದ್ದು ಸದರಿ ಕಾಮಗಾರಿಗಳು ಚುರುಕುಗೊಳಿಸುವುದಕ್ಕಾಗಿ ಇದರ ಅಧಿಕಾರ ವ್ಯಾಪ್ತಿಯನ್ನು ತಾಲ್ಲೂಕು ಪಂಚಾಯಿತಿಗೆ ವಹಿಸುವುದು ಸೂಕ್ತವಲ್ಲವೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು ? ವಿವರ ನೀಡುವುದು

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇಲ್ಲ. ಆದರೂ, ಕಲಂ ೧೩೬ (೧) (ಬಿ) ಪ್ರಕಾರ ಜಿಲ್ಲಾ ಪರಿಷತ್ತಿನವರೇ ಇದನ್ನು ನಿರ್ಧರಿಸಬಹುದು.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಪುರಸಭೆ ಹಾಗೂ ನಗರಸಭೆಗಳಿಗೆ ಬಹುಮಾನ ಯೋಜನೆ

೧೮೭೬. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪುರಸಭೆ ಹಾಗೂ ನಗರಸಭೆಗಳ ಕಾರ್ಯ ದಕ್ಷತೆ ಹೆಚ್ಚಿಸಲು ಹಾಗೂ ಪ್ರಗತಿಯನ್ನು ಮೆಚ್ಚಿ, ಬಹುಮಾನ ಯೋಜನೆ ಜಾರಿಗೆ ತಂದಿರುವುದು ಉಪಯೋಗವಾಗಿದೆಯೇ ?

ಆ) ಸಂಬಂಧಪಟ್ಟ ಪುರಸಭೆ/ನಗರಸಭೆಗಳು ಈ ಬಹುಮಾನ ಪಡೆಯುವಂತೆ ಆಕರ್ಷಿಸಲು ಅವರು ಯಾವ ಯಾವ ಬಾಬಿನಲ್ಲಿ ಪ್ರಗತಿ ಹೊಂದಿರಬೇಕೆಂಬ ನಿರ್ದಿಷ್ಟವಾದ ವಿವರವನ್ನೊಳಗೊಂಡ ಪರಿಪತ್ರ ಸರ್ಕಾರದಿಂದ ಹೊರಡಿಸಲಾಗಿದೆಯೇ ?